ಅದು ಜಲಗಾರರನ್ನೇ ಸಮಾಧಿ ಮಾಡುವ ಸ್ಥಿತಿಯಲ್ಲಿದೆ. ಇಂತಹ ಸ್ಥಿತಿಗೆ ಸರ್ಕಾರದ ನಿಷ್ಕ್ರೀಯತೆಯೇ ಕಾರಣವೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇದಕ್ಕೆ ಸರ್ಕಾರ ಉತ್ತರಿಸಬೇಕು. ಇದರಿಂದ ಈಗಾಗಲೇ 15-20 ಲಕ್ಷ ರೂಪಾಯಿಗಳಷ್ಟು ಪೂರ್ತಿಯಾಗಿ ನಷ್ಟವಾಗಿರುವ ಬಗ್ಗೆ ಸರ್ಕಾರ ಏನು ಮಾಡುತ್ತದೆ? ಆ ಕುರಿತು ಪರಿಶೀಲಿಸಿ ಕೆಲಸವನ್ನು ವಹಿಸಿಕೊಂಡಿದ್ದಂಥ ಗುತ್ತಿಗೆದಾರರು ಬಿಟ್ಟು ಹೋಗಿದ್ದಾರಲ್ಲ ಅವರಿಂದ ಸದರಿ ಹಣವನ್ನು ವಸೂಲು ಮಾಡುತ್ತದೆಯೇ ಮತ್ತು ಆ ದುಡ್ಡಿಗೆ ಯಾರು ಹೊಣೆ? ಸರ್ಕಾರ ಹೊಣೆಯೇ ಅಥವಾ ಅಧಿಕಾರಿ ಹೊಣೆಯೇ ಎಂಬುದನ್ನು ಮಾನ್ಯ ನಗರಾಭಿವೃದ್ಧಿ ಸಚಿವರು ಉತ್ತರಿಸಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ಪ್ರೀಸ್ಟ್ರಕ್ಚರ್ ಕಾಂಕ್ರೀಟ್ ಎಂಬ ಪಿಎಸ್‌ಸಿ ಹೊಸ ವಿಧಾನವೇನಿದೆ, ಆ ನಮೂನೆಯಲ್ಲಿ ನಿರ್ಮಿಸಿರುವ ಟ್ಯಾಂಕ್ ಕೆಲಸ ನಿಂತಿದ್ದು, ಸದರಿ ಕೆಲಸ ಮುಗಿಸಿಲ್ಲ. ಟ್ಯಾಂಕ್ ನಿರ್ಮಾಣ ಕೆಲಸ ಮುಗಿಸಲು ಗುತ್ತಿಗೆದಾರರಿಂಗೆ ನೀಡಿದ್ದ ಹಣವನ್ನು ವಾಪಸ್ಸು ಪಡೆಯಬೇಕೆಂದು ಈಗಾಗಲೇ ಕ್ರಮ ಕೈಗೊಂಡಿದ್ದೇವೆ. ಕುವೆಂಪು ನಗರದಲ್ಲಿರುವ ಪಿಎಸ್‌ಸಿ ನಮೂನೆಯ ಎರಡು ಲಕ್ಷ ಲೀಟರ್‌ಗಳಷ್ಟು ನೀರು ಸಂಗ್ರಹಿಸುವ ಸಾಮರ್ಥ್ಯವಿರುವ ಟ್ಯಾಂಕ್ ಹಾಗೂ ಮತ್ತೊಂದು ಟ್ಯಾಂಕ್, ಇವರೆಡನ್ನೂ ಹೊಸದಾಗಿ ಅದಷ್ಟು ಬೇಗ ನಿರ್ಮಿಸಲು ಕೆಲಸ ಪ್ರಾರಂಭಿಸುತ್ತೇವೆ.

ಶ್ರೀ ಹೆಚ್.ಸಿ. ಶಂಕರಲಿಂಗೇಗೌಡ: ರಿಸರ್‌ವಾಯರ್ ಅನ್ನು ನಿರ್ಮಿಸುವ ಕೆಲಸ ಯಾವಾಗ ಪ್ರಾರಂಭಿಸುತ್ತೀರಿ ಎಂಬುದರ ಬಗ್ಗೆ ನಿರ್ದಿಷ್ಟವಾಗಿ ತಿಳಿಸಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ: ಆದಷ್ಟು ಬೇಗ ಆ ಕೆಲಸವನ್ನು ಪ್ರಾರಂಭಿಸುತ್ತೇವೆ.

ನೇಕಾರರಿಗೆ ಒದಗಿಸಿದ ಸೌಲಭ್ಯಗಳು

100 (881) ಶ್ರೀ ಜೆ.ಟಿ. ಪಾಟೀಲ್:

ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕೈಮಗ್ಗ ನೇಕಾರರಿಗೆ ಸರಿಯಾಗಿ ನೂಲು ಪೂರೈಕೆಯಾಗುತ್ತಿದೆಯೇ? ತಿಂಗಳಿನಲ್ಲಿ ಎಷ್ಟು ದಿವಸಗಳು ಕೆಲಸ ಮಾಡುವರು ಎಂದು ಕೇಳಿರುವ ಪ್ರಶ್ನೆಗೆ ಸಚಿವರು ನೂಲು ಸರಿಯಾಗಿ ಪೂರೈಕೆಯಾಗುತ್ತಿದೆಯೆಂದು ತಿಂಗಳಿನಲ್ಲಿ ಸುಮಾರು 18 ರಿಂದ 22 ದಿವಸಗಳವರೆಗೆ ಕೆಲಸ ಒದಗಿಸಲು ನೂಲನ್ನು ಪೂರೈಸಲಾಗುತ್ತಿದೆಯೆಂದು ಉತ್ತರಿಸಿದ್ದಾರೆ. ತಿಂಗಳಿನಲ್ಲಿ 18 ರಿಂದ 22 ದಿವಸಗಳವರೆಗೆ ನೂಲು ಪೂರೈಕೆ ಮಾಡಿದಲ್ಲಿ ಮಾತ್ರ ನೇಕಾರರು ತಮ್ಮ ಜೀವನೋಪಾಯ ಮಾಡಲು ಸಾಧ್ಯವಾಗುತ್ತದೆಂಬ ಮಾತನ್ನು ಸಚಿವರಿಗೆ ಹೇಳಬಯಸುತ್ತೇನೆ. ಅದಕ್ಕೋಸ್ಕರ ತಿಂಗಳಿನಲ್ಲಿ ಮೂವತ್ತು ದಿವಸಗಳ ಕಾಲ ನೇಕಾರರಿಗೆ ನೂಲನ್ನು ಪೂರೈಸಲು ಕ್ರಮ ಕೈಗೊಳ್ಳುತ್ತೀರಾ? ಎರಡನೆಯದಾಗಿ, ಜವಳಿ ನೀತಿಯಲ್ಲಿನ ಸೌಲಭ್ಯಗಳನ್ನು ನೇಕಾರರಿಗೆ ಒದಗಿಸಲಾಗಿದೆಯೇ? ಹಾಗೂ ನೇಕಾರರಿಗೆ ಪೆನ್‌ಷನ್ ನೀಡುವ ವ್ಯವಸ್ಥೆ ಮಾಡಲಾಗಿದೆಯೇ ಎಂದು ಪ್ರಶ್ನಿಸಿರುವುದಕ್ಕೆ ಉತ್ತರವಾಗಿ ಜವಳಿ ನೀತಿಯಲ್ಲಿ ನಿರೂಪಿಸಿದ ಅನೇಕ ಸೌಲಭ್ಯಗಳನ್ನು ಈಗಾಗಲೇ ನೇಕಾರರಿಗೆ ಒದಗಿಸಲಾಗಿದೆಯೆಂದು ಹಾಗೂ ನೇಕಾರರಿಗೆ ಪೆನ್‌ಷನ್ ನೀಡುವ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಸಚಿವರು

ತಿಳಿಸಿದ್ದಾರೆ. ಇದನ್ನು ತಾವು ಎಷ್ಟು ವರ್ಷಗಳಿಂದ ಪರಿಶೀಲನೆಯಲ್ಲೇ ಇಟ್ಟುಕೊಂಡು ಹೋಗುತ್ತಿದ್ದೀರಿ? ದಯಮಾಡಿ ಎಂದಿನಿಂದ ಈ ಪೆನ್‌ಷನ್ ಯೋಜನೆಯನ್ನು ಪ್ರಾರಂಭಿಸುತ್ತೀರಿ ಎಂಬುದನ್ನು ನಿಖರವಾಗಿ ಹೇಳಬೇಕು ಹಾಗೂ ನೇಕಾರರಿಗೆ ಒದಗಿಸಲಾಗಿರುವ ಸೌಲಭ್ಯಗಳಾವುವು ಎಂಬುದನ್ನು ತಿಳಿಸಬೇಕು. ಅಲ್ಲದೆ, ಕೆ.ಹೆಚ್.ಡಿ.ಸಿ. ಯಲ್ಲಿ ಸುಮಾರು ಮೂವತ್ತು ಸಾವಿರ ಸಂಖ್ಯೆಯಲ್ಲಿದ್ದ ನೇಕಾರರು ಇವೊತ್ತು ಹತ್ತು ಸಾವಿರದಷ್ಟು ಸಂಖ್ಯೆಗೆ ಇಳಿದಿರುವುದಕ್ಕೆ ಕಾರಣವೇನು? ಜಮಖಂಡಿಯಲ್ಲಿ ನೇಕಾರರ ತರಬೇತಿ ಕೇಂದ್ರವನ್ನು ಪ್ರಾರಂಭಿಸಲು ಈಗಾಗಲೇ ಸಚಿವ ಸಂಪುಟದಲ್ಲಿ ನಿರ್ಣಯವಾಗಿರುವುದರಿಂದ ಸದರಿ ಕೇಂದ್ರವನ್ನು ಯಾವಾಗ ಪ್ರಾರಂಭಿಸುತ್ತೀರಿ? ಇನ್ನು ಗ್ರಾಮೀಣ ಭಾಗದಲ್ಲಿರುವ ನೇಕಾರರಿಗೆ ಹಸಿರು ಕಾರ್ಡುಗಳನ್ನು ವಿತರಿಸುವಂತ ವ್ಯವಸ್ಥೆ ಬಗ್ಗೆ ತಾವು ಈಗಾಗಲೇ ನಿರ್ಣಯಿಸಿದ್ದು, ಹಸಿರು ಕಾರ್ಡುಗಳ ಸೌಲಭ್ಯವನ್ನು ಪಟ್ಟಣ ಪ್ರದೇಶದ ನೇಕಾರರಿಗೂ ಸಹ ವಿಸ್ತರಿಸಿದ್ದೀರಿ. ಆದರೆ, ಧಾರವಾಡ ಜಿಲ್ಲೆಯೊಂದನ್ನು ಹೊರತುಪಡಿಸಿ ರಾಜ್ಯದ ಬೇರೆ ಯಾವುದೇ ಜಿಲ್ಲೆಗಳಲ್ಲಿನ ನೇಕಾರರುಗಳಿಗೆ ಈ ಸೌಲಭ್ಯ ತಲುಪಿಲ್ಲ. ವಿಶೇಷವಾಗಿ ಬಿಜಾಪೂರ ಜಿಲ್ಲೆಯಲ್ಲಿ ಶೇಕಡಾ ತೊಂಬತ್ತರಷ್ಟು ನೇಕಾರರಿದ್ದು, ಅವರಿಗೆ ಹಸಿರು ಕಾರ್ಡುಗಳ ಸೌಲಭ್ಯವನ್ನು ಅದಷ್ಟು ಬೇಗ ಒದಗಿಸಿಕೊಡುತ್ತೀರಾ ಎಂದು ಪ್ರಶ್ನಿಸುತ್ತಿದ್ದೇನೆ.

ಶ್ರೀ ಎಂ.ಎಸ್. ಪಾಟೀಲ್: ಸನ್ಮಾನ್ಯ ಅಧ್ಯಕ್ಷರೆ, ಹಸಿರು ಕಾರ್ಡುಗಳ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಾರೆ. ನೇಕಾರರಿಗೆ ಹಸಿರು ಕಾರ್ಡುಗಳ ಸೌಲಭ್ಯಗಳನ್ನು ಒದಗಿಸುವುದು ರಾಜ್ಯ ಸರ್ಕಾರದ ನೀತಿಯಾಗಿದ್ದು, ಸದರಿ ಸೌಲಭ್ಯ ಕೇವಲ ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ. ಹಸಿರು ಕಾರ್ಡು ಸೌಲಭ್ಯವನ್ನು ಕೇವಲ ಧಾರವಾಡ ಜಿಲ್ಲೆಯಲ್ಲಿರುವವರಿಗೆ ಮಾತ್ರ ಒದಗಿಸಿದ್ದು ಬಿಜಾಪುರದಲ್ಲಿರುವ ನೇಕಾರರಿಗೆ ಒದಗಿಸಿಲ್ಲದಿರುವ ವಿಚಾರವನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿರುವುದರಿಂದ ಒಂದು ವೇಳೆ ಸದರಿ ಸೌಲಭ್ಯ ಕೊಡುವಲ್ಲಿ ಅಧಿಕಾರಿಗಳಿಂದ ತೊಂದರೆಯಾಗುತ್ತಿದ್ದರೆ ಆ ಕುರಿತು ಕ್ರಮ ಕೈಗೊಳ್ಳುತ್ತೇನೆ. ಅಲ್ಲದೆ, ಜಮಖಂಡಿಯಲ್ಲಿ ನೇಕಾರರ ತರಬೇತಿ ಕೇಂದ್ರ ಪ್ರಾರಂಭಿಸಬೇಕೆಂದು ಸದಸ್ಯರು ಪ್ರಸ್ತಾಪಿಸಿರುವುದರಿಂದ ಅತಿ ಶೀಘ್ರದಲ್ಲಿಯೇ ಪ್ರಾರಂಭಿಸುವುದಾಗಿ ಹೇಳಬಯಸುತ್ತೇನೆ. ಮತ್ತೆ 18 ರಿಂದ 20 ದಿವಸಗಳೊಳಗೆ ಕೆಲಸ ಕೊಡುತ್ತೀರಿ, 30 ದಿವಸ ಪೂರ್ತಿ ಕೆಲಸ ಕೊಡುವುದಿಲ್ಲ ಎಂದು ಪ್ರಸ್ತಾವ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೆ, ಇದರಲ್ಲಿ ಎರಡೂ ಕಡೆ ಇರತಕ್ಕಂತಹ ತೊಂದರೆ. ಕೆ.ಎಚ್.ಡಿ.ಸಿ. ಯಲ್ಲಿಯೂ ಸಂಪೂರ್ಣ ಕೆಲಸ ಕೊಡುವುದಕ್ಕೆ ಆಗುವುದಿಲ್ಲ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮೂವತ್ತು ದಿವಸ ಕೆಲಸ ಕೊಡಬೇಕು ಎನ್ನುವುದು ನಮ್ಮ ಜವಾಬ್ದಾರಿ ಅದರ ಜೊತೆಗೆ ನೇಕಾರರೂ ಸಹಿತ ಸಂಪೂರ್ಣವಾಗಿ ಮುವತ್ತು ದಿವಸ ಕೆಲಸ ಮಾಡಲಿಕ್ಕೆ ಹಲವಾರು ಕಡೆ ಆಗಿಲ್ಲ. ನೇಕಾರರು ಕೇವಲ ಇದರ ಮೇಲೆ ಡಿಫೆಂಡ್ ಆಗಿಲ್ಲ, ಅವರು ಇನ್ನಿತರ ಕೆಲಸ ಕಾರ್ಯಗಳಿಗೆ ಹೋಗಿ ಅವರು ಮತ್ತೆ ಬೇಕಾದಾಗ ಈ ಕೆಲಸಕ್ಕೆ ಬರುತ್ತಾರೆ. ಆ ದೃಷ್ಟಿಯನ್ನು ಇಟ್ಟುಕೊಂಡು ನಾವು ಒಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಅದೇನೆಂದರೆ ಇವರಿಗೆ ಇನ್‌ಸೆನ್‌ಟೀವ್ ಕೊಡತಕ್ಕಂತಹ ಉದ್ದೇಶದಿಂದ ಅಲ್ಲಿ ಕನಿಷ್ಟ 25 ದಿವಸ ಕೆಲಸ ಮಾಡಲಿ ಎನ್ನುವ ಉದ್ದೇಶದಿಂದ, ಎರಡು ನೂರು ಮೀಟರ್ ಪಾಲಿಸ್ಟರ್ ಬಟ್ಟೆಯನ್ನು 25 ದಿನದೊಳಗೆ ಅವರು ಏನಾದರೂ ನೇಯ್ದು ತೆಗೆದುಕೊಂಡು ಬಂದರೆ ನೂರು ರೂಪಾಯಿ ಹೆಚ್ಚು ಕೊಡುವಂತಹ ವ್ಯವಸ್ಥೆ ಮತ್ತು

ಸ್ಯಾರಿ ದೋತಿ ಸ್ಕೀಂನಲ್ಲಿ 25 ದಿವಸ ಸಂಪೂರ್ಣ ಕೆಲಸ ಮಾಡಿದರೆ 70 ದಿವಸ ಹೆಚ್ಚಿಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡಿ ಅಂದರೆ ಅವರು ಕೆಲಸ ಮಾಡಲಿ ಅನ್ನುವ ಉದ್ದೇಶದಿಂದ ಈ ಸ್ಕೀಮನ್ನೂ ಸಹ ನಾವು ಇಂಟರ್‌ಡ್ಯೂಸ್ ಮಾಡಿದ್ದೇವೆ. ಮತ್ತು ಜವಳಿ ನೀತಿಯಲ್ಲಿ ಎಷ್ಟನ್ನು ಅಳವಡಿಸಿದ್ದೀರಿ ಎಂದು ಪ್ರಸ್ತಾಪ ಮಾಡಿದ್ದಾರೆ.

ಜವಳಿ ನೀತಿಯಲ್ಲಿ 17 ಪ್ರೊಗ್ರಾಂಗಳು ನಮ್ಮಲ್ಲಿ ಇವೆ. ಅದರಲ್ಲಿ 10 ಪ್ರೊಗ್ರಾಂಗಳನ್ನು ಈಗಾಗಲೇ ಇಂಪ್ಲಿಮೆಂಟ್ ಮಾಡಿದ್ದೇವೆ. ಇನ್ನು ಕೆಲವೊಂದು ಹಂತ ಹಂತವಾಗಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವಂತಹ ಮಾತನ್ನು ತಿಳಸಲಿಕ್ಕೆ ಇಚ್ಛಿಪಡುತ್ತೇನೆ. ಮತ್ತು ನೇಕಾರರಿಗೆ ಪೆನ್‌ಷನ್ ಕೊಡುವಂತಹ ವಿಚಾರ ಬಹಳ ದಿವಸಗಳಿಂದ ಪೆಂಡಿಂಗ್ ಇರುವುದು ನಿಜ. ಇದು ಹಲವಾರು ಫೈನಾನ್‌ಷಿಯಲ್ ಡಿಪಾರ್ಟ್‌ಮೆಂಟ್‌ಗೆ ಬಂದಿರುವುದರಿಂದ ಇದು ತಡವಾಗಿದೆ. ನಾನು ಈಗಾಗಲೆ, ಈ ಖಾತೆಯನ್ನು ವಹಿಸಿಕೊಂಡ ಮೇಲೆ ಎರಡು ಮೀಟಿಂಗ್ ಮಾಡಿದೆ. ಮತ್ತು ಶೀಘ್ರದಲ್ಲಿ ಇದನ್ನು ಇಂಪ್ಲಿಮೆಂಟ್ ಮಾಡುವಂತಹ ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಜಗದೀಶ್ ತಿಮ್ಮನಗೌಡ ಪಾಟೀಲ್: ಜಮಖಂಡಿ ನೇಕಾರ ಮುಂದುವರೆದ ತರಬೇತಿ ಕೇಂದ್ರ ಮತ್ತು ನೇಕಾರರ ಪೆನ್‌ಶನ್ ಬಗ್ಗೆ ಯಾವಾಗ ಪರಿಶೀಲನೆ ಅಥವಾ ಪ್ರಾರಂಭ ಮಾಡುತ್ತೀರಿ ಎನ್ನುವುದು ಬೇಡ. ದಯಮಾಡಿ ತಾವು ನಿಖರವಾಗಿ ಎಷ್ಟು ಬೇಗ ಪ್ರಾರಂಭ ಮಾಡುತ್ತೀರಿ ಎಂಬುದನ್ನು ಹೇಳಿದರೆ ಬಹಳ ಸಂತೋಷವಾಗುತ್ತದೆ.

ಶ್ರೀ ಸುಭಾಷ್ ರುಕ್ಮಯ್ಯ ಗುತ್ತೇದಾರ: ನನ್ನ ಆಳಂದ ಗ್ರಾಮದಲ್ಲಿ ಕೂಡ 2,600 ನೇಕಾರರು ಗ್ರಾಮೀಣ ಪ್ರದೇಶಗಳಲ್ಲಿ ಇದ್ದಾರೆ. ಅವರಿಗೆ ಬೇರೆ ಯಾವ ಕೆಲಸಗಳೂ ಬರುವುದಿಲ್ಲ, ಅವರಿಗೆ ನೇಯುವುದು ಒಂದೇ ಕೆಲಸ. ಅದಕ್ಕೆ ನೂಲು ಸರಿಯಾಗಿ ಸಪ್ಲೈ ಆಗುತ್ತಾ ಇಲ್ಲ. ಎರಡು, ಎರಡು ತಿಂಗಳು ಖಾಲಿ ಕೂಡುತ್ತಾ ಇದ್ದಾರೆ, ಒಂದು ಸಲ ಬಂದರೆ ಎರಡು ತಿಂಗಳು ಅವರಿಗೆ ನೂರು ಸಿಗುತ್ತಾ ಇಲ್ಲ, ಅದರ ಸಲುವಾಗಿ ಮಾನ್ಯ ಮಂತ್ರಿಗಳು ಹೇಳಬೇಕು.

ಅಧ್ಯಕ್ಷರು: ಪ್ರಶ್ನೆ ಸಂಖ್ಯೆ 102 (773)ಕ್ಕೆ ಗಣಿ ಮತ್ತು ಭೂ ವಿಜ್ಞಾನ ಸಚಿವರು ಸಮಯ ಕೇಳಿದ್ದಾರೆ, ದಯಮಾಡಿ ಸಹಕರಿಸಿ.

ಸಿಂಧನೂರು ಪುರಸಭಾ ವಾಣಿಜ್ಯ ಸಂಕೀರ್ಣ

103 (920) ಶ್ರೀ ಕೆ. ವಿರೂಪಾಕ್ಷಪ್ಪ:

ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ. ಉತ್ತರದಲ್ಲಿ ಸಿಂಧನೂರು ಪುರಸಭೆಯಲ್ಲಿ 21 ವಾಣಿಜ್ಯ ಮಳಿಗೆಗಳನ್ನು ಕಟ್ಟಲಾಗಿದೆಯೆಂದು ಹೇಳಿದ್ದಾರೆ ಮತ್ತು 1970ರಲ್ಲಿ ಹಂಚಿಕೆ ಮಾಡಲಾಗಿದೆಯೆಂದು ಹೇಳಿದ್ದಾರೆ. 1970ರ ನಂತರ ಮೊದಲ ಹಂಚಿಕೆ ಯಾವ ಕಾರಣದಿಂದ ಮಾಡಿಲ್ಲ? ಇದು ಒಂದನೇ ಪ್ರಶ್ನೆ.